187(2)

CONQUER
GENERAL
SEXUAL
DEBILITIES
WITH
SHAKTI
SUDHA

Reg No. M 1299 (Founded 1917) Daily & Weekly

ಸತ್ಯವಾದಿ
SATYAVADI

(ಅರಮನೆ ಸಿರಸ್ತೇದಾರ್ ಎಂ. ಪಿ. ಸುಬ್ಬರಾಯುರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 28 ಸಂಚಿಕೆ 127] ಶುಕ್ರವಾರ 9—2—45 [3 ಪೈ

ಚಿನ್ನ, ಬೆಳ್ಳಿ, ವಡೆವೆಗಳು,
ಅಮಶಂಖೆಗೆ ಮಾತ್ರಿ ಗುಣಕಾರಿ
ಡಿ ಸೆಂ ಟಿ ಸೈ ರ್
ಮತ್ತು
ರುಾಂಡ ಕಂಪೆನಿಯ ಔಷಧಿಗಳು
ಬೀ ಕಾದರೆ
ಕಾಂತರಾಜ್ & ಕೋ
ರವೆ ಬೀದಿ, ಮೈಸೂರು.

ರೇಷ್ಮೆ ಇಲ್ಲ

ಕಪ್ಪು ಅಕ್ಕಿ ರೇಷನಿಂಗ್‌ನಲ್ಲಿ ಸೇರುವುದಿಲ್ಲವೆಂದು ಮದರಾಸು ಸರಕಾರದ ಅಪ್ಪಣೆಯಾಗಿದೆ.

ಉಪನ್ಯಾಸ

10 ನೇ ತಾರೀಖು ಶನಿವಾರ ಸಾಯಂಕಾಲ 6॥ ಗಂಟೆಗೆ ಪೂನಾ ಡೆಕ್ಕನ್ ಕಾಲೇಜಿನ ಸಂಸ್ಕೃತ ಪ್ರೊ॥ ಡಾ॥ ಎಸ್. ಕೆ. ಬೆಲ್ವಾಲ್‌ಕರರು, ರಾಜಧಾನಿಯ ಮಹಾರಾಜಾ ಕಾಲೇಜಿನಲ್ಲಿ ಶ್ರೀ ಕೃಷ್ಣರಾಜೇಂದ್ರ ಓಲ್ಡರ್ ಜೂಬಿಲಿ ಲೆಕ್ಚರ್ ಸಂಬಂಧದಲ್ಲಿ 'ಭಗವದ್ಗೀತೆ' ಯ ಮೇಲೆ ಉಪನ್ಯಾಸ ಮಾಡುವರು.

ಮದರಾಸಿನಲ್ಲಿ ಮುನಿಸಿಪಲ್ ಕಂದಾಯ ದ್ವಿಗುಣವಾಗಲಿದೆಯಂತೆ.

ಂ ಂ

ಬ್ರಿಟಿಷ್ ಚಿನೋರಕಾದವರಿಗೆ ಜೈನಾದ ನಿಷ್ಠೆಯನ್ನು ಇನ್ನೂ ತಿಳಿಸಿಲ್ಲ. ಟೋಕಿಯೋ ಪತನವಾದರೂ ಜಪಾನು ಯುದ್ಧ ನಿಲ್ಲಿಸುವುದಿಲ್ಲ.

ಂ ಂ

ಮದರಾಸಿನ ಪೌರಸಭಾಧ್ಯಕ್ಷರು ಹಾಲಿನ ಅಭಾವದಿಂದ ಇನ್ನು ಮೇಲೆ ಪುಡಿ ಸೇರಿಸಿ ಹೋಟಲುಗಳಿಗೆ ಕೊಡಬೇಕೆಂದು ಕೇಳಲು, ಸಿವಿಲ್ ಸಪ್ಲೈ ಡೈರೆಕ್ಟರು ಜಹಜಿನ ಅನಾನುಕೂಲದಿಂದ ಆಗುವುದಿಲ್ಲ, ಇರುವ ರಾಸುಳಿಗೆ ಹೊಟ್ಟೆ ತುಂಬ ಮೇವು ಹಾಕಿ ಎಂದು ಉತ್ತರಕೊಟ್ಟರು. ಅಧ್ಯಕ್ಷರು ಮೇಲಿನ ಅಧಿಕಾರಿಗಳಿಗೆ ದೂರು ಹೇಳುವವರಾಗಿರುವರು.

ಮಿತ್ರರಿಗೆ ಡಿ ಗಾಲ್ ನೋಟೀಸ್

ತ್ರಿಮೂರ್ತಿಗಳ ಸಮ್ಮೇಳನದಲ್ಲಿ ಫ್ರಾನ್ಸು ಭಾಗವಹಿಸಿಲ್ಲವಾಗಿ ಈ ಸಮ್ಮೇಳನದ ತೀರ್ಮಾನಕ್ಕೆ ಫ್ರಾನ್ಸು ಬದ್ಧವಾಗಿಲ್ಲವೆಂದು ಡಿಗಾಲರು ಮಿತ್ರರಿಗೆ ನೋಟೀಸು ಕೊಟ್ಟಿರುವರೆಂದು ಹೇಳಲಾಗಿದೆ.

ಯುದ್ಧದ ಕಡೇ ಅಂಕದಲ್ಲಿನ ಮಿಲಿಟರಿ ಕಾರ್ಯಕ್ರಮದ ಬಗ್ಗೆ ತ್ರಿಮೂರ್ತಿಗಳ ಸಮ್ಮೇಳನದಲ್ಲಿ ಏಕಾಭಿಪ್ರಾಯವಾಗಿ ಒಪ್ಪಂದವಾಗಿದೆಯೆಂದು ಹೇಳಲಾಗಿದೆ.

ಪೂರ್ವ ಒಂಗಾಳದ ಮೇಲೆ ಜಪಾನ್ ವಿಮಾನ ಹಾರಾಡಿ ಎರಡು ಬಾಂಬುಗಳು ಬಿದ್ದವೆಂದೂ, ಸಾವುನೋವೇನೂ ಆಗಿಲ್ಲವೆಂದೂ ತಿಳಿಯಬಂದಿದೆ.

ಬಾಂಬಗ್ರ್ ಪತನಕ್ಕೆ ಕಾರಣರೆಂದು ನಾಜೀ ವಿಚಾರಣೆಗೊಳಗಾಗಿದ್ದ ಮೂರು ಮಂದಿ ಸೇನಾಪತಿಗಳು ಡಿಗ್ರೇಡು ಮಾಡಲ್ಪಟ್ಟರು, ಒಬ್ಬ ಪೋಲೀಸು ಮುಖ್ಯಸ್ಥನಿಗೆ ಮರಣದಂಡ ವಿಧಿಸಲಾಯಿತು.

ಯುದ್ಧ ಮುಂದಿನ ಶನಿವಾರ ಮುಗಿಯುವುದೆಂದು ಲಂಡನ್ನಿನ ಒಬ್ಬ ಆಶಾವಾದಿಯು 1 ಕ್ಕೆ 25 ರಂತೆ ಬಾಜಿ ಕಟ್ಟಿದ್ದಾನೆ.

ತ್ರಿಮೂರ್ತಿಗಳ ಸಮ್ಮೇಳನ ಮುಗಿದ ನಂತರ ಮಿ॥ ರೂಸ್ವೆಲ್ಟರು ತಮ್ಮ ಅರಮನೆಗೆ ಬರಬೇಕೆಂದು ಚಾರ್ಜ್ ಚಕ್ರವರ್ತಿಯವರು ಕೊಟ್ಟ ಆಹ್ವಾನವನ್ನು ರೂಸ್ವೆಲ್ಟರು ನಿರಾಕರಿಸಿದರು.

ಬರ್ಲಿನ್ ರಕ್ಷಣಾ ವ್ಯವಸ್ಥೆಯನ್ನು ಗೋರಿಂಗ್ ಸರಿಪಡಿಸುತ್ತಿದ್ದಾನೆ.

1750 ರಲ್ಲಿ ರಷ್ಯನರು ಫ್ರೆಡ್ರಿಕ್ ದಿ ಗ್ರೇಟನ್ನು ಸೋಲಿಸಿದ ಸ್ಥಳವಾದ ಕುನರ್‌ಡಾರ್ಫನ್ನು ರಷ್ಯನರು ಆಕ್ರಮಿಸಿದರು.

ರಷ್ಯನರು ಬರ್ಲಿನ್ನಿಗೆ 30 ಮೈಲಿ ಹತ್ತಿರ ಬಂದಿರುವರೆಂದೂ, ಜರ್ಮನರಲ್ಲಿ ಯುದ್ಧ ಮಾಡುವ ಆಸೆ ಕಂಡುಬಂದಿರುವುದೆಂದೂ ವಾರ್ತೆ ಬಂದಿದೆ.

ರಾಜರಿಗೂ ಮುಸ್ಲಿಂ ಲೀಗಿಗ ಒಪ್ಪಂದ ತಂದು, ಪಾಕಿಸ್ತಾನ್ ಒಪ್ಪಿ ವೈಸರಾಯ್ ಮತ್ತು ಆಳಂಸರ ವಿರುದ್ಧ ಹೊಡೆದಾಡಲು ಭೂಪಾಲ್ ನವಾಬರು ಯತ್ನಿಸುತ್ತಿರುವರೆಂದು ತಿಳಿಯಬಂದಿದೆ.

ಸತ್ಯಸ್ಪರ್ಶದಲ್ಲಿ ಮುಸ್ಲಿಂರಿಗೆ ಆಕ್ಷೇಪಕರವಾದ ಭಾಗವನ್ನು ತೆಗೆದು ತಿದ್ದುಪಡಿಸುವುದು ಸೂಕ್ತವೆಂದು ಗಾಂಧೀಜಿ ಅಭಿಪ್ರಾಯ ಪಟ್ಟಿರುವರು.

ತ್ರಿಮೂರ್ತಿಗಳ ಸಮ್ಮೇಳನ

ರೂಸ್ವೆಲ್ಟ್— ನಿನ್ನೇ ರಾತ್ರಿ ಒಂದು ಸ್ವಪ್ನ ಕಂಡೆ. ಯುದ್ಧ ಮುಗಿಯಿತು. ನನ್ನನ್ನು ಲೀಗ್ ಆಫ್ ನೇಷನ್ಸಿನ ಪ್ರೆಸಿಡೆಂಟರಾಗಿ ಮಾಡಿದರೆಂದು.

ಚರ್ಚಿಲ್ — ನನಗೂ ಸ್ವಪ್ನವಾಯಿತು. ನನ್ನನ್ನು ಲೀಗ್ ಆಫ್ ನೇಷನ್ಸಿನ ಪ್ರಧಾನ ಮಂತ್ರಿಯನ್ನಾಗಿ ಮಾಡಿದರೆಂದು.

ಸ್ಟಾಲಿನ್— ನನಗೆ ಯಾವ ಸ್ವಪ್ನವೂ ಗಿಪ್ನವೂ ಆಗಲಿಲ್ಲ. ನಾನು ಈ ಕೆಲಸಗಳಿಗೆ ಯಾರನ್ನೂ ನೇಮಿಸಿದಂತೆ ಜ್ಞಾಪಕವಿಲ್ಲ.

ಂ ಂ

ಸ್ವೀಕಾರ

ರಾಜಧಾನಿಯ ಸುಪ್ರಸಿದ್ಧ ಜೂಯಲರ್ಸ್ ಮತ್ತು ಕ್ಲಾತ್ ಮರ್ಚೆಂಟ್ಸ್ ಆದ ಶ್ರೀ ಜಿ. ವಿ. ಸೂರ್ಯನಾರಾಯಣ ಶೆಟ್ಟಿ ಎಂಡ್ ಸನ್ಸ್‌ರವರು ಕಳುಹಿಸಿಕೊಟ್ಟಿರುವ ಅಂದವಾದ ಕ್ಯಾಲೆಂಡರನ್ನು ಆದರದಿಂದ ಸ್ವೀಕರಿಸಿರುತ್ತೇವೆ.

ಭಾರತದಲ್ಲಿ ಮಿ॥ ಹಾರ್ನಿಮೆನ್ ಮಾಡಿರುವ ಕೆಲಸಕ್ಕಾಗಿ ಒಂದು ನಿಧಿ ಶೇಖರಿಸುತ್ತಿರುವರು. ಅದಕ್ಕೆ ಈಗ ರೂ. 30 ಸಾವಿರ ಸೇರಿದೆ.

ಂ ಂ

ಅಮೃತಸರದಲ್ಲಿ ಒಬ್ಬ ಹಕೀಮನು ಈಗ 12 ನೇ ಲಗ್ನ ಮಾಡಿಕೊಂಡನು. ಹಿಂದೆ ತಾನು ಮಾಡಿಕೊಂಡಿದ್ದ 11 ಮಂದಿ ಪತ್ನಿಯರಲ್ಲಿ ಬಿದ್ದು ಸತ್ತನು. ಇವನಿಗೆ ಈಗ 56 ಮಕ್ಕಳು, ಮೊಮ್ಮಕ್ಕಳು ಮರಿಮಕ್ಕಳೂ ಇದ್ದಾರೆ. ದೊಡ್ಡ ಮಗನಿಗೆ 60 ವರ್ಷ, ಚಿಕ್ಕ ಮಗನಿಗೆ 3 ವರ್ಷ. ನೂತನ ಮದವಳಿಗನಿಗೆ 86 ವರ್ಷ.

ಜಪಾನ್ ಪತನ ಅಕ್ಕ

ವಿಲ್ಲವೇ?

ಮಿಷನರಿಯ ವಿಚಿತ್ರ ಕಲ್ಪನೆ

ಫಾರ್ಮೋಸಾ ಮತ್ತು ಮಾಂಚೂ ಕೋದಲ್ಲಿ ಒಬ್ಬ ಸ್ವೀಡ್ ಮಿಷನರಿಯು ಅಮೇರಿಕಾ ಪತ್ರಿಕೆಗೆ ಈ ರೀತಿ ಬರೆದಿರುತ್ತಾನೆ—

ಜಪಾನು ಬೇಗನೆ ಪತನವಾಗುವದಿಲ್ಲ. ಗ್ರೇಟ್‌ಬ್ರಿಟನ್ನಿನಹಾಗೆ ಜಪಾನು ದ್ವೀಪಗಳ ರಾಜ್ಯ. ಜರ್ಮನರಿಗೆ ಬ್ರಿಟಿಷ್ ಮುತ್ಸದಿಗಳು ಹೇಗೆ ಆಗಲಿಲ್ಲವೋ ಹಾಗೇ ಮಿತ್ರರಿಗೆ ಜಪಾನ್ ಆಗಿದೆ. ಯುದ್ಧದಲ್ಲಿ ತಾವು ಸೋತೆವು ಎಂದು ಜಪಾನರು ತಿಳಿದುಕೊಂಡಿಲ್ಲ. 1941 ರಲ್ಲಿ ಯುದ್ಧಕ್ಕೆ ಕಾಲಿಟ್ಟಿದ್ದು ತಪ್ಪೆಂದು ತಿಳಿದಿರುವರು. ರಷ್ಯಾ ಪತನವಾಗುವುದೆಂದು ತಿಳಿದು ಬೆಂಕಿಯ ಮೇಲೆ ಕಾಲಿಟ್ಟರು. ವಿಮಾನ ಧಾಳಿಯಿಂದ ಜಪಾನರು ಸೋಲುವುದಿಲ್ಲ. ಟೋಕಿಯೋ ಧಾಳಿಯಾದರೆ ಜಪಾನು ಹೆದರುವಹಾಗಿಲ್ಲ. ಟೋಕಿಯೋ ನಾಶನವಾಗಲು ಬಹು ಕಷ್ಟ. ಜಪಾನೀಯರನ್ನು ಅನ್ನ ಪಲ್ಲಟೆ ಸಾಯಿಸಲು ಆಗಲಾರದು. ಜಪಾನಿಗಳು ಅಲೂಗೆಡ್ಡೆಯನ್ನು ಹೆಚ್ಚಾಗಿ ಬೆಳೆಯುವರು. ಜಪಾನ್ ಮುತ್ತಿಗೆಯಾವರೂ ತಿನ್ನಲು ಅಕ್ಕಿಯನ್ನು ಹೆಚ್ಚಾಗಿ ತೇಖರ ಮಾಡಿಕೊಂಡಿರುವರು.

ಅಲ್ಲಿಯ ಮನುಷ್ಯ ಶಕ್ತಿ ಕುಂದಿಲ್ಲ. ಕುಂದುವಹಾಗೂ ಇಲ್ಲ. ವರ್ಷಕ್ಕೆ 20 ಲಕ್ಷ ಜನರು ಹುಟ್ಟುವರು. ಅಂದರೆ ವರ್ಷಂಪ್ರತಿ 20 ಲಕ್ಷ ಸೈನಿಕರಾಗುವರು.

ಜಪಾನೀಯರಿಗೆ ಜಿಹಜುಗಳ ನಷ್ಟ ಬಹು ಹೆಚ್ಚಾಗಿದೆ. ಸಮುದ್ರದಲ್ಲಿ ಏನನ್ನೂ ಕಳಿಸುವಂತಿಲ್ಲ. ಅಮೇರಿಕ ಸಬ್‌ಮೆರ್ಜಿಗಳನ್ನು ನೋಡಿ ಭಯಪಟ್ಟಿರುವರು. ಆದರೂ ಇದೊಂದು ದೊಡ್ಡ ಕೊರತೆ ಎಂದು ತಿಳಿಯಬಾರದು. ಕಬ್ಬಿಣದ ಟೆಲಿಗ್ರಾಫ್ ಕಂಭವನ್ನೆಲ್ಲಾ ಕಿತ್ತು ಮಣ್ಣಿನ ಟೆಲಿಗ್ರಾಫ್ ಕಂಭಗಳನ್ನೆಲ್ಲಾ ಕಿತ್ತಾ, ಬದಲಾಗಿ ಮರದ ಕಂಭಗಳನ್ನು ಉಪಯೋಗಿಸುತ್ತಾರೆ. ಅದರ ಲೋಹಗಳನ್ನು ವಿಶೇಷವಾಗಿ ದಾಸ್ತಾನು ಮಾಡಿರುವರು. ಜಪಾನೀಯರು ತುಂಬಾ ಚಟುವಟಿಕೆಯ ಮನುಷ್ಯರು.

ಸಾ ಮಾ ಜಿಕ

ಭಾವಪರಿಪೂರ್ಣ ಪಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಮುಗಿಸುವ ವರೆಗೂ ಊಟಕ್ಕೆ ಕೂಡ ಏಳಲು ಮನ ಸ್ಸಾಗುವುದಿಲ್ಲ. ಬೆಲೆ 6 ಆಣೆ. ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು.

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

For Good Printing—

L. N. Press

Srirampet MYSORE

Good Coffee

Sastry's Coffee Rooms

Chamarajapuram, Mysore

TALK-A-TONE

(The Pioneer Film-mag of S. India)

Local Agent—D. Mahadev

Opera Talkies, Mysore

ಬೇಕಾಗಿದ್ದಾರೆ.

ಸತ್ಯವಾದಿ ವಾರದಸಂಚಿಕೆ ಎಲ್ಲಾ ಊರುಗಳಲ್ಲೂ ಏಜಂಟರುಗಳು ಬೇಕಾಗಿದ್ದಾರೆ. ಹೆಚ್ಚಿನ ವಿಷಯಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್, ಸತ್ಯವಾದಿ

ಚಾಮರಾಜಪುರಂ, ಮೈಸೂರು

ಮೈಸೂರು ರಣಜಿತ್ ಟಾಕೀಸಿನಲ್ಲಿ 5 ನೇ ವಾರ

At Ranjit ತಕದಿರ್

(ಹಿಂದಿ)

ಚಂದ್ರಮೋಹನ್ — ಮೋತಿಲಾಲ್ — ನರ್ಗೀಸ್

ಚಾರ್ಲಿ

ಮುಂತಾದವರು ಪಾತ್ರವಹಿಸಿರುವರು

— ದಿನವಹಿ ಮೂರು ಆಟಗಳು —

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಶಕ್ತಿಸುಧಾ

ಸೇವನೆಯೇ ಸುಲಭೋಪಾಯ

ಬೆಲೆ ಡಬ್ಬಿ ಒಂದಕ್ಕೆ ಒಂದು ರೂಪಾಯಿ.

ಶಕ್ತಿಸುಧಾ, ನಂ೬೭ ಚಾಮರಾಜಪುರಂ ಮೈಸೂರು.

ಒಪೆರಾ ಟಾಕೀಸ್

ದೇವಕನ್ಯ

ಹೊನ್ನಪ್ಪ ಭಾಗವತರ್, ಯು. ಆರ್. ಜೀವರತ್ನಂ, ಟಿ. ಆರ್. ರಾಮಚಂದ್ರ

ಮುಂತಾದವರು ಪಾತ್ರವಹಿಸಿರುವರು.

ಪ್ರತಿ ದಿನ 3 ಆಟಗಳು

— ಶೀಘ್ರದಲ್ಲೇ ಬರುತ್ತದೆ —

ವೈ. ವಿ. ರಾವ್, ಕಮಲಾ ಕೊಟ್ನಿಸ್, ಭಾನುಮತಿ, ನಾರಾಯಣರಾವ್

ಪಾತ್ರವಹಿಸಿರುವ

ತಹಸಿಲ್ದಾರ್

(ತೆಲುಗು ಚಿತ್ರ)

ಅಂದವಾದ ಹೊಲಿಗೆಗೆ

ರೆಡಿಮೇಡ್ ಬಟ್ಟೆಗೆ

— ನಮ್ಮಲ್ಲಿ ಬನ್ನಿ —

ಶ್ರೀ ಮಹಾಲಕ್ಷ್ಮಿ ಹಾಲ್

ಸಯ್ಯಾಜಿರಾವ್ ರಸ್ತೆ, ಮೈಸೂರು

ಸತ್ಯವಾದಿ

— ವಾರದ ಸಂಚಿಕೆ —

ಪರಸ್ಥಳಕ್ಕೆ ವಾರ್ಷಿಕ ಚಂದಾ

ಅಂಚೆಸಮೇತ ಸೇರಿ ರೂ. 1-12-0

ಚಿನ್ನಾ ಬೆಳ್ಳಿ ಧಾರಣೆ

ಸವರ್ನ 1 ಕ್ಕೆ	ರೂ. 73-4-0
ಚಿನ್ನ ತೊಲ 1 ಕ್ಕೆ	49-14-0
ಬೆಳ್ಳಿ "	1-5-6

Edited, Printed and published by M. S. Krishna Rao, at the Satyavadi Press, Chamaraja Agrahar, Mysore